MYSORE LEGISLATIVE ASSEMBLY

Monday, 12th April 1965.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Grant-in-aid paid to Vidyarthi Prasada Nilaya, Koppal.

*Q.—340. SRI VEERABHADRAPPA ERAPPA (Yelburga).—

Will the Government be pleased to state :—

(*a*) since when grant-in aid is being paid by them to the Vidyarthi Prasada Nilaya, Koppal, together with the amount that is being paid ;

(*b*) whether they have received any complaints regarding misappropriation of money by the convener of the said institution, collected from the public, students and the Government ?

*A.—SMT. YASHODHARA DASAPPA (Minister for Social Welfare).—

(*a*) The institution is receving grants from Government since 1960-61. The year-wise position is as follows :—

Year	Amount of Grant-in-aid
	Rs.
1960-61	3,000
1961-62	3,000
1962-63	5,100
1963-64	3,300
1964-65	*Nil*
Total ...	14,400

(*b*) There were some allegations against the Institution about misappropriation of certain amounts, wrong accounting and failure to convene a general body meeting.

ಶ್ರೀ ವೀರಭದ್ರಪ್ಪ ಈರಪ್ಪ.—ಸರ್ಕಾರದವರು ಇಂತಹ ಸಂಸ್ಥೆಗಳಿಗೆ ಸಹಾಯ ಧನವನ್ನು ಕೊಡುವ ಕಾಲಕ್ಕೆ ಆ ಸಂಸ್ಥೆಯವರು ಮಾಟಿಂಗ್ ನಡೆಸಿರತಕ್ಕ ಪ್ರೊಸೀಡಿಂಗ್ಸ್ ಮತ್ತು ಠರಾವು ಗಳನ್ನು ನೋಡಿ ಯಾವ್ಯಾವ ಸದಸ್ಯರು ಅಲ್ಲಿ ಇದ್ದಾರೆ, ಎಂದು ಮಾಹಿತಿಯನ್ನು ತೆಗೆದುಕೊಂಡು ಸಹಾಯಧನ ಕೊಡುತ್ತಾರೆಯೇ ಅಥವಾ ಹಾಗೆಯೇ ಕೊಡುತ್ತಾರೆಯೇ ?

†ಶ್ರೀಮತಿ ಯಶೋಧರ ದಾಸಪ್ಪ.—ಆ ಸಂಸ್ಥೆ ಅಲ್ಲಿನ ಸದಸ್ಯರಿಂದ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ನೋಡಿಯೇ ಸರ್ಕಾರದವರು ಸಹಾಯಧನವನ್ನು ಕೊಡುತ್ತಾರೆ.

ಶ್ರೀ ವೀರಭದ್ರಪ್ಪ ಈರಪ್ಪ.—ಹಾಗಾದರೆ ಈ ನಿಲಯದ ವಿದ್ಯಾರ್ಥಿಗಳು 1962ರಿಂದ 1965 ರವರೆಗೆ ಎಷ್ಟು ಸಾರಿ ಕಮಿಟಿ ಮೀಟಿಂಗ್‌ಗಳನ್ನು ಮಾಡಿದರು ? ಅಂತಹ ಪ್ರೊಸೀಡಿಂಗ್ಸನ್ನು ಎಷ್ಟು ಸಾರಿ ಸರ್ಕಾರದವರು ಪರಿಶೀಲನೆ ಮಾಡಿದ್ದಾರೆ ?

ಶ್ರೀಮತಿ ಯಶೋಧರ ದಾಸಪ್ಪ.—ಆ ನಿಲಯದ ಜನರಲ್ ಬಾಡಿ ಮೀಟಿಂಗ್ ಇನ್ನೂ ಆಗಿಲ್ಲ. ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗುಗಳು ಆಗಿವೆ. ವರ್ಷಕ್ಕೆ ಎರಡು ಸಾರಿ ಮೀಟಿಂಗ್ ನಡೆಸಿ ಅದರ ವರದಿಯನ್ನು ಮೀಂಟಿಂಗ್‌ನಲ್ಲಿಟ್ಟು ಅಡಿಟೆಡ್ ಅಕೌಂಟ್ಸ್ ಸಹ ನೋಡಿ ಮಂಜೂರುಮಾಡಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ವಿದ್ಯಾರ್ಥಿ ನಿಲಯದ ಕಮಿಟಿ ಮೀಟಿಂಗ್‌ಗಳೆಷ್ಟು ನಡೆದಿವೆ ? ಎಷ್ಟು ಜನರು ಹಾಜರಿದ್ದರು ?

ಶ್ರೀಮತಿ ಯಶೋಧರ ದಾಸಪ್ಪ.—1960ರಿಂದ 64 ರವರೆಗೆ ಎಗ್ಸಿಕ್ಯುಟಿವ್ ಕಮಿಟಿ ಮೀಟಿಂಗುಗಳು ನಡೆದಿವೆ. ಸದಸ್ಯರು ಅವಕ್ಕೆ ಅಟೆಂಡ್ ಆಗಿರುವವರು 10, 4, 10, 6, 5, ಹಾಜರಾತಿ ಹೀಗಿದೆ.

ಶ್ರೀ ಎ. ಎಂ. ದೇವ್.—ಎಗ್ಸಿಕ್ಯುಟಿವ್ ಕಮಿಟಿಯವರು ಅತರೈಸ್ಡ್ ಮಾಡಿರುವುದಕ್ಕಿಂತ ಎರಡರಷ್ಟು ಎವಾಲ್ಯುಮೆಂಟನ್ನು ಹಲವಾರು ತಿಂಗಳುಗಳಿಂದ ಸೆಕ್ರೆಟರಿಯವರು ಡ್ರಾ ಮಾಡುತ್ತಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಈ ಹಾಸ್ಟಲಿಗೆ ಇಬ್ಬರು ಸೆಕ್ರೆಟರಿಗಳಿದ್ದಾರೆ. ಒಬ್ಬರು ಗೌರವ ಕಾರ್ಯದರ್ಶಿ, ಇನ್ನೊಬ್ಬರು ಸಂಬಳ ತೆಗೆದುಕೊಳ್ಳುವ ಕಾರ್ಯದರ್ಶಿ. ಅವರಿಗೆ ತಿಂಗಳಿಗೆ 100 ರೂಪಾಯಿಗಳ ಸಂಬಳ. ಎಗ್ಸಿಕ್ಯುಟಿವ್ ಕಮಿಟಿಯ ರೆಕ್ಕಗಳನ್ನು ಇಡುವುದನ್ನು ಸಂಬಳ ತೆಗೆದು ಕೊಳ್ಳುವ ಕಾರ್ಯದರ್ಶಿಮಾಡುವುದಾಗಿದೆ.

ಶ್ರೀ ಬಿ. ಎರ್. ಗೌಡ.—ಈ ಸಂಸ್ಥೆ ಅಧಿಕಾರವರ್ಗದವರು ತಮ್ಮ ಅಧಿಕಾರವನ್ನು ಹಾಗೂ ಹಣವನ್ನು ದುರುಪಯೋಗ ಮಾಡಿರುವ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿರುವುದರಿಂದ ಅದರ ವಿಚಾರದಲ್ಲಿ ಸರ್ಕಾರದವರು ಏನಾದರೂ ತನಿಖೆ ಕ್ರಮವನ್ನು ತೆಗೆದು ಕೊಂಡಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ದೂರುಗಳು ಬಂದಿರುವುದು ಜನರಲ್ ಬಾಡಿ ಮೀಟಿಂಗ್ ಕರೆದಿಲ್ಲ, ಹುಡುಗರಿಂದ ಹಣ ವಸೂಲುಮಾಡುತ್ತಿದ್ದಾರೆ, ಒಂದು ಟ್ರಸ್ಟಿನಿಂದ ಮೂರು ಸಾವಿರ ರೂಪಾಯಿಗಳಷ್ಟು ಹಣ ತೆಗೆದುಕೊಂಡ ಬಗ್ಗೆ ರೆಕ್ಕಪತ್ರ ಕೊಟ್ಟಿಲ್ಲವೆಂದು ಹೀಗೆ ಮೂರು ತರಹ ದೂರು ಗಳು ಬಂದಿವೆ. ಆದರೆ ಹುಡುಗರಿಂದ ಹಣವನ್ನು ಹಾಗೆ ವಸೂಲು ಮಾಡುತ್ತಿಲ್ಲ. ಅವರ ತಾಯಿ ತಂದೆ ಗಳು ಯಾವುದಾದರೂ ಒಂದು ರೂಪದಲ್ಲಿ ಆ ಹಣವನ್ನು ಕೊಡುತ್ತಿದ್ದಾರೆಯೇ ವಿನಾ ಮುಕ್ಕಳು ಹಾಸ್ಟಲ್‌ರ್‌ಗೆ ಇಷ್ಟು ಹಣ ಕೊಡಬೇಕೆಂದು ತೀರ್ಮಾನಮಾಡಿಲ್ಲ. ಸಬ್‌ಸ್ಕ್ರಿಪ್ಷನ್ ಬೇರೆ ಎತ್ತಿದ್ದಾರೆ ಲೇಟೆಸ್ಟ್ ಅಕೌಂಟ್‌ನ್ನು ತೆಗೆದುಕೊಂಡಿದ್ದಾರೆ. ಆಡಿಟ್ ಆಗಿದೆ. ಅದನ್ನು ಕಮಿಟಿ ಮುಂದೆ ಇಟ್ಟಿದ್ದಾರೆ.

Sri K. LAKKAPPA.—It has been specifically stated that some misappropriation charges have been levelled against the convenor. What is the agency that Government has got to enquire into such misappropriations in Public institutions ?

ಶ್ರೀಮತಿ ಯಶೋಧರ ದಾಸಪ್ಪ.—ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಅವರು ಡೆಪ್ಯುಟಿ ಕಮಿಷನರ್ ಮೂಲಕ ಆ ವಿಚಾರದ ಬಗ್ಗೆ ವಿಚಾರಣೆ ಮಾಡುತ್ತಿದ್ದಾರೆ. ಅವರ ವರದಿಯ ಪ್ರಕಾರ ಮೂರು ಸಾವಿರ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಅದು ಹಾಸ್ಟಲ್ ಖರ್ಚಿಗೋಸ್ಕರ ನಡೆದಿಲ್ಲ. ಟ್ರಸ್ಟ್‌ನಿಂದ ಸ್ವಂತ ಜವಾಬ್ದಾರಿಯ ಮೇಲೆ ಆ ರೀತಿ ಹಣವನ್ನು ಡ್ರಾ ಮಾಡಿದ್ದಾರೆ. ಈಗ 750 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಅವರು ವರದಿ ಮಾಡಿದ್ದಾರೆ. ಅದನ್ನು ಹಾಸ್ಟಲರ್ ಗೋಸ್ಕರ ಖರ್ಚುಮಾಡುವುದಕ್ಕೆ ತೆಗೆದುಕೊಂಡಿಲ್ಲ.

† Indicates that th remarks or speeches have not been revised by the member concerned

ಶ್ರೀಮತಿ ಬಸವರಾಜೇಶ್ವರಿ.— ಈ ಸಂಸ್ಥೆಯವರು ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ಏನಾದರೂ ಹಣವನ್ನು ಪಡೆದಿದ್ದಾರೆಯೇ ?

ಶ್ರೀಮತಿ ಯಶೋಧರ ದಾಸಪ್ಪ.—ಹೌದು. ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಅವರಿಗೆ ಪ್ರತಿವರ್ಷವೂ ಕೊಡುತ್ತಿದ್ದಾರೆ.

ಶ್ರೀಮತಿ ಬಸವರಾಜೇಶ್ವರಿ.—ಅದು ಸೋಷಿಯಲ್ ವೆಲ್‌ಫೇರ್ ಬೋರ್ಡಿನಿಂದಲೇ ?

ಶ್ರೀಮತಿ ಯಶೋಧರ ದಾಸಪ್ಪ.—ನಮ್ಮ ಇಲಾಖೆಯಿಂದ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರ್ಕಾರಕ್ಕೆ ಇದರ ಮೇಲೆ ಆರೋಪಣೆಗಳನ್ನು ಮಾಡಿರುವುದು ಸತ್ಯವೆಂದು ಕಂಡರೆ ಆಗ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ?

ಶ್ರೀಮತಿ ಯಶೋಧರ ದಾಸಪ್ಪ.—ಆರೋಪಣೆಗಳು 3 ವಿಷಯಗಳಲ್ಲಿ ಬಂದಿವೆ. ಯಾವುದೋ ಒಂದು ಟ್ರಸ್ಟಿನಿಂದ ಹಣವನ್ನು ತೆಗೆದುಕೊಂಡಿದ್ದಾರೆ. ಅದಕ್ಕೂ ನಮಗೂ ಸಂಬಂಧವಿಲ್ಲ. ಅದನ್ನು ಪ್ರೈವೇಟ್ ಕೆಪಾಸಿಟಿಯಿಂದ ತೆಗೆದುಕೊಂಡಿದ್ದಾರೆ. ಆದರೆ ಯಾವ ಟ್ರಸ್ಟ್‌ನಿಂದ ಅದನ್ನು ತೆಗೆದುಕೊಂಡಿದ್ದಾರೆಂಬುದನ್ನು ಅವರು ಕೇಳಬೇಕು. ನಮ್ಮ ಹಾಸ್ಟಲಿನ ಹಣ ಇದುವರೆಗೆ ಕೊಟ್ಟಿರುವ ಹಾಗೆ ಇಲ್ಲ. ಅದನ್ನು ವಿತ್‌ಹೋಲ್ಡ್ ಮಾಡಿದ್ದೇವೆ. ಸರಿಯಾಗಿ ಎಕ್ಸ್‌ಪ್ಲನೇಷನ್ ಬರುವವರೆಗೂ ಹಣವನ್ನು ಕೊಡುವುದಿಲ್ಲವೆಂದು ಹೇಳಿದ್ದೇವೆ.

Sri K. LAKKAPPA.—It has been stated that the general body meeting has not been convened. After the charges levelled against this institution, what steps have Government taken to convene a general body meeting ?

ಶ್ರೀಮತಿ ಯಶೋಧರ ದಾಸಪ್ಪ.—ಜನರಲ್ ಬಾಡಿ ಮೀಟಿಂಗ್ ಮಾಡದೇ ಇರುವುದರಿಂದಲೇ ಅವರಿಗೆ ಕೊಡುವ ಹಣವನ್ನು ವಿತ್‌ಹೋಲ್ಡ್ ಮಾಡಿದ್ದು. ಅದೇ ಕಾರಣ. ಅವರು ಈಗ ಜನರಲ್ ಬಾಡಿ ಮೀಟಿಂಗ್ ಜಾಗ್ರತೆಯಾಗಿ ಕರೆಯಬೇಕು, ಇರತಕ್ಕ ದೂರುಗಳಿಗೆ ಸಮಜಾಯಿಷಿ ಕೊಡಬೇಕು—ಇವುಗಳ ಬಗ್ಗೆ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಮತ್ತು ಡೆಪ್ಯುಟಿ ಕಮಿಷನರ್ ವಿಚಾರಣೆ ಮಾಡಬೇಕೆಂದು ತಿಳಿಸಿದೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ.—ಹಾಗಾದರೆ ಸರ್ಕಾರದವರು 1964-65 ಸಾಲಿನ ಗ್ರಾಂಟನ್ನು ಕೊಡುತ್ತಾರೋ ಅಥವಾ ಬಿಡುತ್ತಾರೋ ?

ಶ್ರೀಮತಿ ಯಶೋಧರ ದಾಸಪ್ಪ.—ಈಗಿರತಕ್ಕ ದೂರುಗಳ ಬಗ್ಗೆ ಸರಿಯಾಗಿ ರುಜುವಾತು ಮಾಡಿ ಸಮಜಾಯಿಷಿ ಕೊಡದಿದ್ದರೆ ಅವರಿಗೆ ಹಣ ಕೊಡುವುದನ್ನು ನಿಲ್ಲಿಸಲಾಗುತ್ತದೆ.

———

Water Supply to Gadag-Betgeri Municipal Borough.

*Q.—386. Sri K. P. GADAG (Gadag).—

Will the Government be pleased to state :—

(*a*) whether it is a fact the State Government and the Gadag-Betgeri Municipal Borough have approved the Scheme of Water Supply to Gadag-Betgeri Municipal Borough from the Tungabhadra River near Hesarur ;

(*b*) if so, on what basis, whether on the basis of payment for the water supplied or on Instalment of the amount spent for the scheme ?

A.—Sri K. PUTTASWAMY (Minister for Municipal Administration).—

(*a*) No.

(*b*) Does not arise.